Reg. No. | | | | | | | | | |

# BASKAC 181/BASKAO 154

**Choice Based Credit System/Credit Based II Semester B.A. Examination, September 2022**
**(2019 – 20 and Earlier Batches)**
**ಕನ್ನಡ (ಪತ್ರಿಕೆ – II)**
**ಹೊಸಗನ್ನಡ ಸಾಹಿತ್ಯ ಚರಿತ್ರೆ ಮತ್ತು ಪಠ್ಯಗಳು**

Time : 3 Hours                                                                 Max. Marks : 120

**ಭಾಗ – ೧**
**ಕಾವ್ಯ**

I. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿ. **(1×12=12)**

1) ಕುಲದ ಕುರಿತ ಪಂಪನ ಮತ್ತು ವಚನಕಾರರ ವ್ಯಾಖ್ಯಾನವನ್ನು ವಿಶ್ಲೇಷಿಸಿ.

**ಅಥವಾ**

2) 'ಉಳ್ಳವರ ವೈಭವಗಳಿಗೆ ಶ್ರಮಿಕರ ಶ್ರಮವೇ ಕಾರಣ' ಈ ಹೇಳಿಕೆಯನ್ನು 'ರೊಟ್ಟಿ ಮತ್ತು ಕೋವಿ' ಕವನದ ಹಿನ್ನೆಲೆಯಲ್ಲಿ ವಿಮರ್ಶಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿ. **(1×8=8)**

1) ಕಂಡಿಲ್ಲವೇ ಕನಸು ? ಕವನದ ಆಶಯವನ್ನು ವಿವರಿಸಿ.

**ಅಥವಾ**

2) 'ಹಾಗಾದರೆ ಮಾರಿಬಿಡಿ' ಕವನದ ಔಚಿತ್ಯವನ್ನು ಚರ್ಚಿಸಿ.

II. ಅ) **ಎರಡರ** ಬಗ್ಗೆ ಟಿಪ್ಪಣಿ ಬರೆಯಿರಿ. **(2×5=10)**

1) ಸಾವಿರಾರು ನದಿಗಳು ಕವನದಲ್ಲಿ ಪ್ರತಿಪಾದಿತವಾಗಿರುವ ನಿಲುವು.
2) ಗಜಲ್‌ನ ವಿಶೇಷತೆ.
3) ಬರಗೂರುರವರ ಕವನದಲ್ಲಿ ದುಡಿಮೆಗಾರರ ಬದುಕಿನ ಕಥೆ.
4) 'ನಾಳೆಗಾದರೂ ....' ಕವನದ ಆಶಯ.

ಆ) **ಮೂರು** ಸಾಲುಗಳ ಸಂದರ್ಭ ಬರೆದು ಸ್ವಾರಸ್ಯ ವಿವರಿಸಿ. **(3×4=12)**

1) ಕುಲ ಕುಲವೆಂದು ಹೊಡೆದಾಡದಿರಿ.
2) ಒಬ್ಬ ಮುಟ್ಟದವನು, ಇನ್ನೊಬ್ಬ ಮುಟ್ಟಬಾರದವನು.
3) ಕುಲಂ ಕುಲಮಲ್ಲು ಚಲಂ ಕುಲಂ.
4) ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ.

**P.T.O.**

III. **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. **(8×1=8)**

1) ಕನ್ನಡದ ರತ್ನತ್ರಯರಲ್ಲಿ ಮೊದಲಿಗನಾದ ಕವಿ ಯಾರು ?
2) ಆದ್ಯವಚನಕಾರ ಯಾರು ?
3) 'ಮೋಹನ ತರಂಗಿಣಿ' ಯಾರ ಕೃತಿ ?
4) 'ಊರುಕೇರಿ' ಇದು ಯಾರ ಆತ್ಮಕಥೆ ?
5) 'ಗಜಲ್' ಎಂದರೆ ಏನು ?
6) ಸು.ರಂ. ಎಕ್ಕುಂಡಿಯವರ ಪೂರ್ಣ ಹೆಸರೇನು ?
7) 'ಬಂಡಾಯದ ಹಾಡು' ಇದು ಯಾರ ಕವನ ಸಂಕಲನ ?
8) 'ಕೂಡಲಸಂಗಮದೇವ' ಇದು ಯಾರ ಅಂಕಿತ ?

**ಭಾಗ – ೨**

**ಸಣ್ಣಕತೆ**

IV. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿ. **(1×12=12)**

1) ಧನ್ವಂತರಿ ಚಿಕಿತ್ಸೆ ಕಥೆಯ ಆಶಯವನ್ನು ವಿವರಿಸಿ.

**ಅಥವಾ**

2) ಹೊಸ ಹುಟ್ಟು ಕಥೆಯ ವೈಶಿಷ್ಟ್ಯವನ್ನು ಚರ್ಚಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿ. **(1×6=6)**

1) ಪರಸಪ್ಪ ಮತ್ತು ಆತನ ಮಗ ಸೈದನ ಪಾತ್ರವನ್ನು ವಿಶ್ಲೇಷಣೆ ಮಾಡಿ.

**ಅಥವಾ**

2) ಮಾನವೀಯತೆ ಇಲ್ಲದ ಸಮಾಜ ಮೂಕಿಯನ್ನು ಬೆಂಬಿಡದೆ ಕಾಡಿದ ಬಗೆ ಕೊನೆಯ ಗಿರಾಕಿ ಕಥೆಯಲ್ಲಿ ಅಭಿವ್ಯಕ್ತಗೊಂಡ ಪರಿಯನ್ನು ಚರ್ಚಿಸಿ.

V. ಅ) **ಒಂದರ** ಬಗ್ಗೆ ಟಿಪ್ಪಣಿ ಬರೆಯಿರಿ. **(1×4=4)**

1) ಪ್ರಾಣಪಕ್ಷಿ ಕತೆಯ ಅಮಿನಾ.
2) ಕೊನೆಯ ಗಿರಾಕಿ ಕತೆಯ ಕಾಣಿ.

ಆ) **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. **(8×1=8)**

1) 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಕರ್ತೃ ಯಾರು ?
2) 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಇದು ಯಾರ ಕೃತಿ ?

3) ‘ಗೌರ್ಮೆಂಟ್ ಬ್ರಾಹ್ಮಣ’ ಇದು ಯಾರ ಆತ್ಮಕಥೆ ?

4) ಕುಳಕುಂದ ಶಿವರಾಯರ ಕಾವ್ಯನಾಮ ಯಾವುದು ?

5) ‘ಪ್ರಾಣಪಕ್ಷಿ’ ಇದು ಯಾರ ಕಥಾಸಂಕಲನ ?

6) ದೇವಲೋಕದ ವೈದ್ಯ ಯಾರು ?

7) ಬಾಗೋಡಿ ಪರಸಪ್ಪನ ಮಗ ಯಾರು ?

8) ಕಾಣಿಯ ದೇಹದ ಮೇಲೆ ಯಾವ ಪಕ್ಷಿಯು ಹಾರಾಡುತ್ತಿತ್ತು ?

**ಭಾಗ – ೩**

**ಹೊಸಗನ್ನಡ ಸಾಹಿತ್ಯ ಚರಿತ್ರೆ**

VI. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿರಿ. **(1×12=12)**

1) ನವ್ಯ ಸಾಹಿತ್ಯದ ಲಕ್ಷಣವನ್ನು ವಿವರಿಸಿ.

**ಅಥವಾ**

2) ದಲಿತ ಸಾಹಿತ್ಯದ ಸ್ವರೂಪವನ್ನು ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿರಿ. **(1×8=8)**

1) ಬಂಡಾಯ ಸಾಹಿತ್ಯವನ್ನು ಕುರಿತು ಬರೆಯಿರಿ.

**ಅಥವಾ**

2) ಮಹಿಳಾ ಸಾಹಿತ್ಯದ ಇತಿಹಾಸವನ್ನು ವಿವರಿಸಿ.

VII. ಅ) **ಒಂದರ** ಬಗ್ಗೆ ಟಿಪ್ಪಣಿ ಬರೆಯಿರಿ. **(1×5=5)**

1) ಸಾರಾ ಅಬೂಬಕ್ಕರ್.

2) ಪಿ.ಲಂಕೇಶ.

ಆ) **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. **(5×1=5)**

1) ನವ್ಯ ಸಾಹಿತ್ಯ ಮಾರ್ಗದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ ಪ್ರಕಾಶನವೊಂದನ್ನು ಹೆಸರಿಸಿ.

2) “ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ” – ಇದು ಯಾವ ಸಾಹಿತ್ಯದ ಧ್ಯೇಯ ವಾಕ್ಯ ?

3) ‘ಕನ್ನಡ ಸಾಹಿತ್ಯ ಬೂಸಾ’ ಎಂದು ನುಡಿದವರು ಯಾರು ?

4) ಲಂಬಾಣಿ ಸಂಸ್ಕೃತಿ ಸಂವೇದನೆಗಳನ್ನು ಚಿತ್ರಿಸಿದ ಲೇಖಕಿ ಯಾರು ?

5) ಕನ್ನಡದ ಮೊದಲ ನವ್ಯ ಕಾದಂಬರಿ ಯಾವುದು ?

VIII. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಉತ್ತರಿಸಿ. **(1×7=7)**

1) ಹೊಸಗನ್ನಡದ ಆರು ಛಂದೋಲಯಗಳನ್ನು ವಿವರಿಸಿ.

**ಅಥವಾ**

2) 'ಸಾನೆಟ್' ಎಂದರೇನು ? ವಿವರಿಸಿ.

ಆ) **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. **(3×1=3)**

1) ಶ್ರೀಗೋವಿಂದ ಪೈಯವರ ಪ್ರಸಿದ್ಧವಾದ ಪ್ರಗಾಥವನ್ನು ಹೆಸರಿಸಿ.

2) ಸರಳ ರಗಳೆ ಎಂದರೇನು ?

3) 'ಇಂಗ್ಲೀಷ್ ಗೀತಗಳು' ಇದು ಯಾರ ಕೃತಿ ?

---